# 'ವೀಸಾದ ನಿರೀಕ್ಷಣೆಯಲ್ಲಿ ಆತ್ಮಕಥನ': ಡಾ.ಬಿ.ಆರ್. ಅಂಬೇಡ್ಕರ ಜೀವನ ಮತ್ತು ಪ್ರಯೋಗಗಳು.

**ಅಜೀತ ಪಾತ್ರೋಟ[1] & ಶಿವಗಂಗಾ ರುಮ್ಮಾ[2]**

[1]ಸಂಶೋಧನಾರ್ಥಿ, ಕನ್ನಡ ವಿಭಾಗ, ಮಾನವಿಕ ಮತ್ತು ಭಾಷಾ ನಿಕಾಯ, ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ, ಕಡಗಂಚಿ, ಕಲಬುರ್ಗಿ.

[2]ಪ್ರಾಧ್ಯಾಪಕರು, ಕನ್ನಡ ವಿಭಾಗ, ಮಾನವಿಕ ಮತ್ತು ಭಾಷಾ ನಿಕಾಯ, ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ, ಕಡಗಂಚಿ, ಕಲಬುರ್ಗಿ.

**Received: 02-05-2024 ; Acepted: 03-06-2024 ; Published: 09-07-2024**

**DOI: https://doi.org/10.5281/zenodo.12672742**

**ABSTRACT:**

ಆತ್ಮಕಥೆ ಬರೆದುಕೊಳ್ಳುವುದು ಮನುಷ್ಯ ಬದುಕಿನ ಪ್ರಮುಖ ಬೆಳವಣಿಗೆಯಾಗಿದೆ. ಈ ಕಾರಣವಾಗಿಯೆ ಮನುಷ್ಯ ತನ್ನ ಸರಿ ತಪ್ಪುಗಳನ್ನು ನಿವೇದಿಸಿಕೊಂಡು ಬದುಕಿನ ವಿಕಾಸದತ್ತ ದಾಪುಗಾಲಿಡುವುದು ಕಾಣಬಹುದು. ಮಾನವ ಬೆಳವಣಿಗೆ ಮತ್ತು ವಿಕಾಸ ಕ್ರಮದಲ್ಲಿ ತನ್ನ ಬದುಕಿನ ಅನುಭವಗಳನ್ನು ಮನೆ, ಸಮಾಜ, ಪರಿಸರ, ಸಂಸ್ಕೃತಿಗಳಿಂದ ರೂಪುಗೊಂಡಿವೆ. ಅವುಗಳು ಮನುಷ್ಯ ಒಳ ಹೊರಗನ್ನು ಅರಿತುಕೊಳ್ಳಲು ಸಹಾಯ ಮಾಡುತ್ತವೆ. ಇಲ್ಲಿ ಪ್ರಮುಖವಾಗಿ ಡಾ.ಬಿ.ಆರ್. ಅಂಬೇಡ್ಕರ್ ಅವರು ತಮ್ಮ ಬದುಕಿನುದ್ದಕ್ಕೂ ಅನುಭವಿಸಿದ ದುಃಖ ದುಮ್ಮಾನಗಳು, ಸಂಕಟಗಳು ಮತ್ತು ಅವುಗಳಿಂದ ಬಿಡುಗಡೆಗೆ ಹಾತೋರೆಯುವ ಮನಸ್ಥಿತಿ ಪ್ರಕಟಗೊಳ್ಳುತ್ತದೆ. ಅಲ್ಲದೆ ಅವರು ಕಂಡುಕೊಳ್ಳುವ ಪರಿಹಾರೋಪಾಯಗಳು ಎಲ್ಲವೂ ಒಂದೊಂದು ಹೊಸ ಪ್ರಯೋಗದಂತೆ ಗೋಚರಿಸುತ್ತದೆ. ಅಲ್ಲದೆ ಅವು ಓದುಗರಿಗೆ ಸಂದೇಶಗಳಾಗಿ ಮಾರ್ಪಡುತ್ತವೆ.

**KEYWORDS:**

ಬಿ.ಆರ್. ಅಂಬೇಡ್ಕರ್, ಅನುಭವ, ಜೀವನ, ಸಮಾಜ, ಅಸ್ಪೃಶ್ಯತೆ, ನೀರಿನ ಪ್ರಶ್ನೆ, ಮೌನ ಸಂಘರ್ಷ.

ಜಗತ್ತು ಹೇಗೆ ಸೌಂದರ್ಯದ ಅಂತರಂಗವನ್ನು ಹೊಂದಿದೆಯೋ ಹಾಗೆ ಕ್ರೌರ್ಯದ ಅಂತರ್ಯ್ಯವನ್ನು ಹೊಂದಿದೆ. ಮನುಷ್ಯ ಸಮಾಜದಲ್ಲಿ ಜಾತಿ, ಜನಾಂಗ, ವರ್ಗ, ವರ್ಣ, ಲಿಂಗ, ಅಸ್ಪೃಶ್ಯತೆ ಆಚರಣೆಯಂತಹ ತರತಮದ ಜಗತ್ತು ಕಾಣಿಸುತ್ತದೆ. ಇವುಗಳನ್ನು ಪ್ರತ್ಯಕ್ಷವಾಗಿ ಅನುಭವಿಸಿದ ಜಗತ್ತಿನಿಂದ, ಅನೇಕ ಜನರು ತಮ್ಮ ಅನುಭವಗಳನ್ನು ತಮ್ಮ ಆತ್ಮಕತೆಗಳಲ್ಲಿ ಮುಕ್ತವಾಗಿ ಬರೆದುಕೊಂಡಿದ್ದಾರೆ. ಇಲ್ಲಿ ಡಾ. ಬಾಬಾಸಾಹೇಬ ಅಂಬೇಡ್ಕರ ಅವರ ವೀಸಾದ ನಿರೀಕ್ಷಣೆಯಲ್ಲಿ ಆತ್ಮಕತೆಯು ಅಂತವುಗಳ ಸಾಲಿಗೆ ಸೇರುತ್ತದೆ. ಈ ಆತ್ಮಕತೆಯು ಭವಿಷ್ಯತ್ತಿನಲ್ಲಿ ಬದಲಾಗುವ ಭಾರತೀಯ ಸಮಾಜದ ಹೊಸ ಬಗೆಯ ಸಮಸ್ಯೆಗಳು ಯಾವವು? ಎಂಬುದನ್ನು ಎದುರಿಗಿಡುತ್ತದೆ. ಒಂದು ಕಡೆ ಶತಮಾನಗಳಿಂದ ತುಳಿತಕ್ಕೊಳಗಾದ ದಲಿತ ಜನಾಂಗದ ಬಿಡುಗಡೆಯ ದಾರಿಯನ್ನು ಕಾಯುತ್ತಿದ್ದರೆ.

ಇನ್ನೊಂದು ಕಡೆ ಭವಿಷ್ಯತ್ತಿನ ಮಾನವೀಯ ಸಮಾಜದ ಕನಸುಗಳನ್ನು ಹೊತ್ತಿದೆ. ಸಮಾಜದ ಈ ತರತಮಗಳ ಬಿಡುಗಡೆ ಮಾರ್ಗಕ್ಕೆ ಈ ಹಿಂದೆ ಹಾಕಿಕೊಂಡಿರುವ ಸೂತ್ರಗಳು ಫಲಿಸಬಹುದೆ? ಎಂಬ ಪ್ರಶ್ನೆಗಳು ಆಳದಲ್ಲಿ ಕಾಡಿವೆ. ಬದಲಾದ ಭಾರತೀಯ ಸಮಾಜದಲ್ಲಿ ಅಸ್ಪೃಶ್ಯತೆ ಆಚರಣೆ ಹೇಗಿರುತ್ತದೆ? ಗ್ರಾಮಗಳಲ್ಲಿ ಇದ್ದಾಗ ಮತ್ತು ಗ್ರಾಮಗಳಿಂದ ನಗರಗಳಿಗೆ ಸ್ಥಾನಾಂತರವಾದಾಗ ಅಲ್ಲಿನ ಜಗತ್ತು ಹೇಗೆ ನಡೆಸಿಕೊಳ್ಳುತ್ತದೆ? ಹೊಸ ಬಟ್ಟೆ ಹೊಸ ಬದುಕು ನಂತರ ಜಾತಿಯ ಪ್ರಶ್ನೆಗಳು ಇವೆಯೆವೋ ಇಲ್ಲವೋ? ಉನ್ನತ ಶಿಕ್ಷಣದ ನಂತರ ನೌಕರಿ ಪಡೆದಾಗ ಸರಿಕರು ನಡೆಸಿಕೊಳ್ಳುವ ರೀತಿ? ಜೊತೆಗಾರರು ಮಾತಿನ ಶೈಲಿ? ವಿದ್ಯಾವಂತರ ಮಾನಸಿಕ ಸ್ಥಿತಿ? ಸ್ವಾಸ್ಥ ಸಮಾಜದ ಅನಾರೋಗ್ಯಕರ ಮನಸ್ಥಿತಿಗಳನ್ನು ಅಂಬೇಡ್ಕರ್ ಸ್ವತಃ ಅನುಭವಕ್ಕೆ ಪಡೆದಾಗ ಅವರಲ್ಲಿ ಭವಿಷತ್ತಿನ ಭಾರತದ ಚಿತ್ರಣ ಕಣ್ಣ ಮುಂದೆ ಹಾಯುತ್ತದೆ. ಅವರ ನಿರೀಕ್ಷಣೆಗಳು ಫಲಿಸುತ್ತವೆಯೋ ಅಥವಾ ಹುಸಿಯಾಗಿವೆಯೋ ಅನ್ನುವುದನ್ನು ಈ ಆತ್ಮಕತೆ ಏಳೆ ಏಳೆಯಾಗಿ ಬಿಚ್ಚಿಡುತ್ತದೆ. ಇಲ್ಲಿ ಶತಮಾನಗಳಿಂದ ಕಾಡಿದ ನೀರಿನ ಪ್ರಶ್ನೆಗಳು, ಧಾರ್ಮಿಕ ಪ್ರಶ್ನೆಗಳು ಮತ್ತು ಜಾತಿ ಪ್ರಶ್ನೆಗಳ ಜೊತೆ ಒಡ್ಡಿಕೊಂಡಿರುವ ಅಂತರ್ಯದ ಧ್ವನಿ ಒಂದು ಕಾಣುವುದು. ಅಲ್ಲದೆ ಅವುಗಳಿಗೆ ಪ್ರಯೋಗಾರ್ಥವಾಗಿ ಅನೇಕ ಕೃತಿಕಾರ್ಯಗಳು ನಡೆಯುತ್ತವೆ. ಮೂಕನಾಯಕದಂತಹ ಪತ್ರಿಕೆಯೊಂದು ಅಸ್ಪೃಶ್ಯ ಸಮಾಜಕ್ಕೆ ಬಾಯಿಯಂತೆ ಕೆಲಸ ನಿರ್ವಹಿಸಲು ಪ್ರಾರಂಭಿಸುತ್ತದೆ. ಇಲ್ಲಿ ಅನೇಕ ಪ್ರಯೋಗಗಳು ಬಾಬಾ ಸಾಹೇಬರ ಜೀವನದಲ್ಲಿನ ಅನುಭವಗಳನ್ನು ಆದರಿಸಿವೆ. ಪ್ರಯೋಗಗಳ ಮೂಲಕ ರೋಗಗ್ರಸ್ಥ ಸಮಾಜಕ್ಕೆ ಮದ್ದುಕೊಟ್ಟರು ಅಲ್ಲಿರುವವರ ಮನಸ್ಥಿತಿ, ಸಮಸ್ಯೆಗಳು ಬೇರೆ ರೀತಿಯ ಸ್ವರೂಪ ಪಡೆದುಕೊಂಡಿರುವುದು ಕಾಣಿಸಿಕೊಳ್ಳುತ್ತದೆ.

ಮೊದಲನೆಯದಾಗಿ ಬಾಬಾ ಸಾಹೇಬರು ತಮ್ಮ ವಿಸಾದ ನೀರಿಕ್ಷಣೆಯಲ್ಲಿ ಆತ್ಮಕತೆ ಪ್ರಾರಂಭವು, ಅದರ ಸ್ಪಷ್ಟ ಉದ್ದೇಶ ತಿಳಿಸಿದೆ. ಹಿಂದೂ ಸ್ಪೃಶ್ಯ ಸಮುದಾಯಗಳು ಅಸ್ಪೃಶ್ಯರನ್ನು ಹೇಗೆ ನಡೆಸಿಕೊಳ್ಳುತ್ತಾ ಬಂದಿದ್ದಾರೆ. "ಅಲ್ಪಸಂಖ್ಯಾತರಾದ ಅಸ್ಪೃಶ್ಯರು, ಹಿಂದೂಗಳೇ ಬಹುಸಂಖ್ಯೆಯಲ್ಲಿರುವ ಗ್ರಾಮದ ಅಂಚಿನಲ್ಲಿಯೇ ವಾಸಿಸುತ್ತ, ಅನೇಕರಿಗೆ ಇಷ್ಟವಿಲ್ಲದ ಹೊಲಸನ್ನು ಹೊತ್ತೊಯ್ದು ಸ್ವಚ್ಚ ಮಾಡಲು ಗ್ರಾಮದ ಒಳಗೆ ನಿತ್ಯವೂ ಹೋಗುವವರು... ಗ್ರಾಮವನ್ನು ಎಲ್ಲ ದೃಷ್ಟಿಯಿಂದಲೂ ತಮ್ಮ ಮೂಲ ನೆಲೆಯನ್ನಾಗಿ ಪರಿಗಣಿಸಿದ್ದರೂ ಗ್ರಾಮದ ಇತರರನ್ನು ಮುಟ್ಟದವರು ಮತ್ತು ಇತರರಿಂದ ಮುಟ್ಟಿಸಿಕೊಳ್ಳದವರು.. .ಸ್ಪೃಶ್ಯ ಹಿಂದೂಗಳು ಅಸ್ಪೃಶ್ಯರೊಂದಿಗೆ ಹೇಗೆ ನಡೆದುಕೊಂಡರು ಎಂಬುದನ್ನು ಚೆನ್ನಾಗಿ ತಿಳಿಸುವುದೆ ನನ್ನ ಮುಖ್ಯ ಉದ್ದೇಶ."[1] ಬಹುಜನರ ಭಾರತದಲ್ಲಿ ತರತಮಗಳನ್ನು ಅನುಭವಿಸಿದ ಜಗತ್ತಿನಿಂದ ಬಂದ ಬಾಬಾಸಾಹೇಬರು ಗ್ರಾಮಗಳನ್ನು ತುಂಬ ಹತ್ತಿರದಿಂದ ಒಳಗಿನಿಂದ ಅನುಭವಿಸಿ, ಗಮನಿಸಿ ಅವುಗಳ ರಚನೆಯನ್ನು ಅರಿತವರು. ಶ್ರೇಣಿಕೃತ ವ್ಯವಸ್ಥೆಯಲ್ಲಿ ಅಂಚಿನ ಸಮುದಾಯಗಳೊಳಗೆ ಬದುಕಿ ಗ್ರಾಮಗಳ ಮೂಲ ರಚನಾಕ್ರಮದಲ್ಲಿ, ಆಚರಣೆಗಳಲ್ಲಿ ಇರುವ ತೊಡಕುಗಳನ್ನು ಅಧ್ಯಯನ ಮಾಡಿದರು. ಭಾರತದಲ್ಲಿ ಜಾತಿ ವ್ಯವಸ್ಥೆಯ ಬೇರುಗಳನ್ನು ತಿಳಿದು ಅವುಗಳಿಗೆ ಪರಿಹಾರೋಪಾಯಗಳನ್ನು ಕಂಡುಕೊಂಡರು. ದಲಿತ ಸಮುದಾಯದ ಜನರ

ಅಭ್ಯುದಯಕ್ಕೆಂದು ಹಲವಾರು ಸೂತ್ರಗಳನ್ನು ರಚಿಸಿದರು. ಪ್ರಯೋಗವನ್ನು ಮಾಡಲು ಪ್ರಾರಂಭಿಸಿದರು. ಭಾರತೀಯ ಗ್ರಾಮೀಣ ಸಮಾಜದಲ್ಲಿ ಇರುವ ವೃತ್ತಿ ಆಧಾರಿತ ಜಾತಿ ವ್ಯವಸ್ಥೆ ಮತ್ತು ಅಸ್ಪೃಶ್ಯತೆಯಂತ ಆಚರಣೆಗಳನ್ನು ತಿಳಿಸುವುದು ಮತ್ತು ಅವುಗಳಿಂದ ಬಿಡುಗಡೆ ಪಡೆಯುವದು ಮುಖ್ಯ ಉದ್ದೇಶವಾಗಿ ಕಾಣುಸಿಗುತ್ತದೆ.

ಆರು ಘಟನೆಗಳ ಸುತ್ತಲೂ ನಡೆಯುವ ಈ ಪ್ರಯೋಗಗಳು ಹೊಸ ಸಮಸ್ಯೆಗಳ ಚಹರೆಗಳು ಕಾಣಿಸಿಕೊಳ್ಳುತ್ತವೆ. ಮೊದಲನೆಯದಾಗಿ ಪ್ರಯಾಣ ಮಾಡುವಾಗ, ಮನೆ ಬಾಡಿಗೆ ಕೇಳುವಾಗ, ಅಥವಾ ನೀರು ಕುಡಿಯುವಾಗ ಆದ ಅವಮಾನಗಳು ಒಂದೊಂದಾಗಿ ಇಲ್ಲಿ ಕಾಣಿಸುತ್ತವೆ. "ನಾವು ಒಳ್ಳೆ ಬಟ್ಟೆ ಧರಿಸಿದ್ದೆವು. ನಮ್ಮ ಬಟ್ಟೆಗಳಿಂದಾಗಲೀ, ಮಾತುಕತೆಯಿಂದಾಗಲೀ ನಾವು ಅಸ್ಪೃಶ್ಯರ ಮಕ್ಕಳೆಂದು ಯಾರಿಗೂ ತಿಳಿಯುವಂತಿರಲಿಲ್ಲ. ನಿಜ ಹೇಳಬೇಕೆಂದರೆ ಸ್ಟೇಷನ್ ಮಾಸ್ತರರು, ನಾವು ಬ್ರಾಹ್ಮಣರ ಮಕ್ಕಳೆಂದೇ ತಿಳಿದಂತಿತ್ತು. ಮತ್ತು ನಮ್ಮ ಅಸಹಾಯಕತೆಯ ಬಗ್ಗೆ ಅವನ ಮನಸ್ಸು ಪೂರ್ತಿ ಕರಗಿತ್ತು... ಹಿಂದೂಗಳಲ್ಲಿ ರೂಢಿಯಲ್ಲಿರುವಂತೆ ಸಹಜವಾಗಿ ನಾವಾರು ಎಂದು ಕೇಳಿದ. ಒಂದು ಅರೆಕ್ಷಣವೂ ವಿಚಾರಿಸದೆ, ನಾನು ಥಟ್ಟನೆ ನಾವು ಮಹಾರರು ಎಂದು ಉತ್ತರಿಸಿದೆ. (ಮಹಾರರೆಂದರೆ ಮುಂಬಯಿ ರಾಜ್ಯದಲ್ಲಿರುವ ಅಸ್ಪೃಶ್ಯರಲ್ಲಿಯ ಒಂದು ಪಂಗಡವೆಂದು ಪರಿಗಣಿತವಾಗಿತ್ತು). ನನ್ನ ಮಾತನ್ನು ಕೇಳುತ್ತಿದ್ದಂತೆಯೇ ಅವನು ಬೆಚ್ಚಿಬಿದ್ದ. ಅವನ ಮುಖದಲ್ಲಿ ಬದಲಾವಣೆ ಕಾಣಿಸಿಕೊಂಡಿತು. ನಮ್ಮ ಬಗ್ಗೆ ತಿರಸ್ಕಾರಭಾವ ಮೂಡಿದ್ದನ್ನು ಯಾರಾದರೂ ಗುರುತಿಸಬಹುದಾಗಿತ್ತು."[2] ಒಳ್ಳೆಯ ಬಟ್ಟೆ ಧರಿಸುವುದು, ಮಾತುಗಾರಿಕೆಯಲ್ಲಿ ವ್ಯತ್ಯಾಸ ತೋರಿಸುವುದು, ಜಾತಿಯನ್ನು ಮರೆಮಾಡುವುದು, ಇದೊಂದು ಪ್ರಯೋಗವಾಗಿತ್ತು. ಆದರೆ ಮೂಲ ಜಾತಿಯ ಪ್ರಶ್ನೆ ಬಂದಾಗ ಅದನ್ನು ಮರೆ ಮಾಡಲು ಸಾಧ್ಯವಾಗದೆ, ಅನಿವಾರ್ಯವಾಗಿ ಹೇಳಿಕೊಂಡಾಗ ಎದುರಿನವರ ಮುಖದ ವ್ಯತ್ಯಾಸಗಳನ್ನು ಬಾಬಾಸಾಹೇಬರು ಸೂಕ್ಷ್ಮವಾಗಿ ಗಮನಿಸಿದ್ದು ಕಾಣಿಸುತ್ತದೆ. ಅಂದರೆ ಈ ಆತ್ಮಕಥೆ ಬರೆದುಕೊಳ್ಳುತ್ತಿರುವ ಕಾಲ 1935 ರಿಂದ 1940 ಇರಬಹುದು. ಇಲ್ಲಿ ಅವರನ್ನು ಕಾಡುವ ಪ್ರಶ್ನೆಗಳು ತುಂಬಾ ವಿಚಿತ್ರವಾಗಿವೆ. ಒಂದನೆಯದು ಉನ್ನತ ಶಿಕ್ಷಣ ಪಡೆದ ನಂತರ ಅಸ್ಪೃಶ್ಯತೆ, ಶ್ರೇಣಿಕೃತ ಜಾತಿ ವ್ಯವಸ್ಥೆಯಿಂದ ಪಾರಾಗಬಹುದು ಎಂಬ ಅವರ ನಿರೀಕ್ಷೆಗಳಿದ್ದವು. ಆದರೆ ಇಲ್ಲಿ ಘಟನೆಗಳು ಕೊಡಲಿ ಪೆಟ್ಟಿನಂತೆ ಪರಿಣಮಿಸುತ್ತವೆ. ಎರಡನೆಯದು ಆಳವಾಗಿ ಕಾಡಿದ್ದು ನಗರಗಳಲ್ಲಿ ಜಾತಿಯತೆ, ಅಸ್ಪೃಶ್ಯತೆಯ ಸ್ವರೂಪಗಳು. ಬಟ್ಟೆಬರೆ, ಆಚರಣೆ, ಆಹಾರ, ಸ್ವಚ್ಛತೆ, ಉದ್ಯೋಗ ಇವುಗಳಿಂದಾಚೆಗೂ ಅಸ್ಪೃಶ್ಯತೆ, ವ್ಯವಸ್ಥೆಯ ಹೊಸ ರೂಪಗಳು ಇಲ್ಲಿ ಕಾಣಿಸುತ್ತ ಹೊಗುವುದು ಸ್ವತಃ ಅವರ ಅನುಭವಕ್ಕೆ ಬರುತ್ತದೆ.

"ಒಂದು ವೇಳೆ ನೀವು ಮಹಾರರು ಎಂದು ನಿಜ ಹೇಳಿದರೆ ನಿಮಗೆ ನೀರು ಸಿಗುವುದು ಸಾಧ್ಯವೇ ಇಲ್ಲವೆಂದನು. ನೀವು ಮಹಮ್ಮದೀಯರು ಎಂದು ಹೇಳಿ ನಿಮ್ಮ ಅದೃಷ್ಟವನ್ನು ಪರೀಕ್ಷಿಸಿರಿ ಎಂದನು. ಅವನ ಉಪದೇಶದಂತೆ ನಾನು ಸುಂಕ ಸಂಗ್ರಾಹಕನ ಗುಡಿಸಲಿಗೆ ಹೋಗಿ 'ನಮಗೆ ಕುಡಿಯಲು ನೀರು ಕೊಡುತ್ತೀರಾ?' ಎಂದು ಕೇಳಿದೆ. ನೀನಾರು?' ಎಂದು ಅವನು ವಿಚಾರಿಸಿದ. 'ನಾವು ಮುಸಲ್ಮಾನರು' ಎಂದು ಹೇಳಿದೆ.

ನಿಜವಾಗಿ ಮುಸಲ್ಮಾನನೇ ಎಂಬ ಸಂಶಯ ಬರದಿರಲೆಂದು ನನಗೆ ಚೆನ್ನಾಗಿ ಬರುತ್ತಿದ್ದ ಉರ್ದುವಿನಲ್ಲೇ ಅವನೊಂದಿಗೆ ಮಾತನಾಡಿದೆ. ನನ್ನ ತಂತ್ರ ಫಲಿಸಲಿಲ್ಲ. 'ನಿಮಗೆಂದು ಯಾರಾದರೂ ನೀರು ಇಟ್ಟಿದ್ದಾರೆಯೆ? ಗುಡ್ಡದ ಮೇಲೆ ನೀರಿದೆ. ಅಲ್ಲಿಗೆ ಹೋಗುವ ಮನಸ್ಸಿದ್ದರೆ ಹೋಗಿ ತೆಗೆದುಕೊಳ್ಳಿ. ನನ್ನ ಹತ್ತಿರ ನೀರಿಲ್ಲ... ಹೀಗೆಂದು ಹೇಳಿ ನನಗೆ ನೀರು ಕೊಡಲಿಲ್ಲ... ನೀರು ಏಕೆ ಸಿಗಲಿಲ್ಲವೆಂದರೆ ನಾವು ಅಸ್ಪೃಶ್ಯರಾದ್ದರಿಂದ."[3] ಇಲ್ಲಿಯ ವರೆಗೂ ಜಾತಿಯ ಮೂಲಕ ಜಾತಿ ಮರೆಮಾಚುವ ಸಲಹೆಗಳ ಸಿಕ್ಕದ್ದು ಜೊತೆ ಈಗ ಧರ್ಮದ ಮೂಲಕ ಜಾತಿ ಮರೆಮಾಚುವ ಸಲಹೆಗಳು ಸಿಗುತ್ತವೆ. ಇಲ್ಲಿ ನೀರಿನ ಪ್ರಶ್ನೆ ಮುಖ್ಯವಾದ್ದರಿಂದ ಧರ್ಮ, ಜಾತಿ ಮುಖ್ಯವಾಗುವದಿಲ್ಲ. ಈಗಾಗಲೆ ಬಾಬಾಸಾಹೇಬರಗೆ ಇದ್ದ ನಂಬಿಕೆಗೆ ದೊಡ್ಡಪೆಟ್ಟು ಬಿಳುವದು ಇಲ್ಲಿ ಉನ್ನತ ಶಿಕ್ಷಣ, ಒಳ್ಳೆಯ ಬಟ್ಟೆ, ಭಾಷೆ ಮತ್ತು ಜಾತಿ ಮರೆಮಾಚುವಿಕೆಯಿಂದಾದರೂ ಇಲ್ಲಿನ ಸಮಾಜದ ಮನಸ್ಥಿತಿ ಅಷ್ಟು ಇಷ್ಟು ಬದಲಾಗಬಹುದು ಎಂಬ ನಿರೀಕ್ಷೆಯು ಸುಳ್ಳಾದಂತೆ ಅವರಲ್ಲಿ ಭಾಸವಾಗುತ್ತದೆ.

ಬಾಲ್ಯದಲ್ಲಿ ಶಾಲೆ ಕಲಿಯುವಾಗ ಬಾಬಾ ಸಾಹೇಬರು ನೀರಿಗಾಗಿ ಏನೆಲ್ಲಾ ಕಷ್ಟಗಳನ್ನು ಎದುರಿಸಬೇಕಾಗಿತ್ತು ಅವೆಲ್ಲಾ ಘಟನೆಗಳು ಇಲ್ಲಿ ಇವೆ. "ನಾನು ಓದುತ್ತಿದ್ದ ಶಾಲೆಯಲ್ಲಿ ನನ್ನ ಸಾಧನೆಗೆ ಅನುಸರಿಸಿ ವಿದ್ಯಾರ್ಥಿಗಳ ಮಧ್ಯದಲ್ಲಿ ವಿದ್ಯಾರ್ಥಿಗಳೊಂದಿಗೆ ಕೂಡಲು ನನಗೆ ಅವಕಾಶವಿರಲಿಲ್ಲ. ಒಂದು ಮೂಲೆಯಲ್ಲಿ ಪ್ರತ್ಯೇಕವಾಗಿ ಒಬ್ಬನೇ ಕೂಡಬೇಕಾಗುತ್ತಿತ್ತು. ಶಾಲೆಯಲ್ಲಿ ನಾನೇ ಪ್ರತ್ಯೇಕವಾದ ಗೋಣಿಚೀಲ ತಂದು ಅದರ ಮೇಲೆ ಮುದುಡಿಕೊಂಡು ಕುಳಿತುಕೊಳ್ಳಬೇಕಾಗಿತ್ತು. ನಾನು ಉಪಯೋಗಿಸುತ್ತಿದ್ದ ಗೋಣಿಚೀಲವನ್ನು ಕಸಗುಡಿಸುವ ಸೇವಕನೂ ಕೂಡ ಮುಟ್ಟುತ್ತಿರಲಿಲ್ಲವೆಂಬುದೂ ನನ್ನ ನೆನಪಿನಲ್ಲಿತ್ತು. ಆ ಗೋಣಿಚೀಲವನ್ನು ಪ್ರತಿದಿನ ಸಾಯಂಕಾಲ ಮನೆಗೆ ಒಯ್ದು ಮರುದಿನ ಮುಂಜಾನೆ ತರಬೇಕಾಗುತ್ತಿತ್ತು. ಶಾಲೆಯಲ್ಲಿದ್ದಾಗ ಸ್ಪೃಶ್ಯ ಜಾತಿಗಳ ಮಕ್ಕಳು ನೀರಡಿಕೆಯಾದಾಗ ನಲ್ಲಿ ಜೋಡಿಸಿದ ಪೀಪಾಯಿಸಿ ಹೋಗಿ ತಾವೇ ನೀರು ಬಿಟ್ಟು ಕುಡಿದು ತಮ್ಮ ನೀರಡಿಕೆಯನ್ನು ಹಿಂಗಿಸಿಕೊಳ್ಳುತ್ತಿದ್ದರು... ನಾನು ಉಳಿದ ಹುಡುಗರಂತೆ ನಲ್ಲಿಯನ್ನು ಮುಟ್ಟುವಂತಿರಲಿಲ್ಲ. ಸ್ಪೃಶ್ಯ ವ್ಯಕ್ತಿಯೇ ನಲ್ಲಿಯನ್ನು ಚಾಲು ಮಾಡಿದಾಗಲೇ ನಾನು ನೀರು ಕುಡಿದು ನೀರಡಿಕೆಯನ್ನು ನೀಗಿಸಿಕೊಳ್ಳಬೇಕಾಗಿತ್ತು... ಸೇವಕನು ದೊರಕದಿದ್ದಾಗ ನಾನು ನೀರಿಲ್ಲದೆ ಕೊರಗಬೇಕಾಗಿತ್ತು."[4] ಬಾಬಾಸಾಹೇಬರು ಬಾಲ್ಯದಲ್ಲಿನ ಘಟನೆಗಳನ್ನು ಮೆಲಕು ಹಾಕುತ್ತಾರೆ. ಬಾಲ್ಯದಲ್ಲಿ ಅತಿಯಾಗಿ ಕಾಡಿದ ಅಸ್ಪೃಶ್ಯತೆ, ಪ್ರತ್ಯೇಕತೆಗಳು, ನೀರು ಪಡೆಯಲು ಮಾಡಿದ ಸಂಘರ್ಷಗಳು ಇಲ್ಲಿ ನೆನಪಿಸಿಕೊಂಡಿದ್ದಾರೆ. ಇಲ್ಲಿ ನೀರಿಗಾಗಿ ಪರದಾಡಿದ ಸಂಕಟಗಳು ಅತಿಯಾಗಿ ಕಾಡುತ್ತವೆ. ಬಾಲ್ಯದಲ್ಲಿ ಹೀಗಾದರೆ ದೊಡ್ಡವರಾದ ನಂತರವು ಶಿಕ್ಷಣ ಪಡೆದು ಸುಶಿಕ್ಷಿತರಾದರು ಅಸ್ಪೃಷ್ಯತೆ ಅತಿಯಾಗಿ ಕಾಡುತ್ತದೆ. "ಸ್ಪೃಶ್ಯರ ಬಟ್ಟೆ ಒಗೆಯುವವರು ಅಸ್ಪೃಶ್ಯರ ಬಟ್ಟೆಗಳನ್ನು ಒಗೆಯುವಂತಿರಲಿಲ್ಲ. ಕೂದಲು ಕತ್ತರಿಸುವ ಕಾರ್ಯವನ್ನು ಅಂದರೆ ನನ್ನನ್ನೊಳಗೊಂಡ ಗಂಡುಮಕ್ಕಳ ಕ್ಷೌರವನ್ನು ನನ್ನ ಹಿರಿಯಕ್ಕನೇ ಮಾಡುತ್ತಿದ್ದಳು. ಮಾಡುತ್ತಾ ಮಾಡುತ್ತಾ ಆಕೆ ಕುಶಲ ಕ್ಷೌರಿಕಳಾಗಿದ್ದಳು... ನಾವು ಅಸ್ಪೃಶ್ಯರಾಗಿದ್ದುದರಿಂದ ಯಾವ ಕ್ಷೌರಿಕನೂ ನಮ್ಮ ಕ್ಷೌರ ಮಾಡಲು ಸಮ್ಮತಿಸುತ್ತಿರಲಿಲ್ಲ. ...ಈ ಘಟನೆ ನನ್ನ ಮನಸ್ಸಿನ ಮೇಲೆ ಹಿಂದೆಂದೂ ಮಾಡಿರದಂಥ ದೊಡ್ಡ

ಆಘಾತವನ್ನುಂಟುಮಾಡಿತು. ಇದು ಅಸ್ಪೃಶ್ಯತೆಯ ಬಗೆಗೆ ಚಿಂತಿಸುವಂತೆ ಪ್ರೇರಣೆ ನೀಡಿತು"[5] ಬಾಲ್ಯದಲ್ಲಿ ಅನುಭವಿಸಿದ ಅಸ್ಪೃಶ್ಯತೆಯ ವಿವಿಧ ಘಟನೆಗಳನ್ನು ನೆನಪು ಮಾಡಿಕೊಂಡಿದ್ದಾರೆ. ಈ ಮೂಲಕ ಅಲ್ಲಿನ ಬಟ್ಟೆ ತೊಳೆಯುವವರು, ಕ್ಷೌರಿಕರು ಅವರನ್ನು ಮುಟ್ಟಲು ನಿರಾಕರಿಸಿರುವುದು, ನೀರು ಕೊಡದೆ ಸತಾಯಿಸಿದ್ದು ಇವೆಲ್ಲವು ಅಸ್ಪೃಶ್ಯತೆಯ ವಿರುದ್ಧ ಬಾಬಾಸಾಹೇಬರನ್ನು ಧ್ವನಿ ಎತ್ತುವಂತೆ ಮಾಡಿವೆ. ಈ ಮುಂದಿನ ಘಟನೆ ಶಿಕ್ಷಣ ಪಡೆದ ನಂತರ ಉದ್ಯೋಗಕ್ಕಾಗಿ ನಗರಕ್ಕೆ ಹೊದಾಗ ಆದ ಅನುಭವಗಳು ಇವೆ.

ನಗರದಲ್ಲಿ ಮನೆ ಬಾಡಿಗೆ ಪಡೆಯುವ ಸಂದರ್ಭದಲ್ಲಿಯು ಬಾಬಾ ಸಾಹೇಬರಿಗೆ ಅಸ್ಪೃಶ್ಯತೆ ಕಾಡುತ್ತದೆ. "ನೀನಾರು? ಇಲ್ಲಿಗೇಕೆ ಬಂದೆ? ಪಾರ್ಸಿ ಹೆಸರನ್ನಿಟ್ಟುಕೊಂಡು ಇಲ್ಲಿರಲು ನಿನಗೆಷ್ಟು ಧೈರ್ಯ? ನೀನು ಈ ಪಾರ್ಸಿ ಪ್ರವಾಸಿ ಗೃಹವನ್ನು ಕಲುಷಿತಗೊಳಿಸಿರುವೆ"[6] ಬರೋಡಾ ಮಹಾರಾಜರ ಒಪ್ಪಂದದಂತೆ ಶಿಕ್ಷಣ ಮುಗಿದ ನಂತರ ಆಸ್ಥಾನದಲ್ಲಿ ಅಕೌಂಟೆಂಟ್ ಜನರಲ್ ಕಾರ್ಯಾಲಯದಲ್ಲಿ ಉಮೇದುವಾರನಾಗಿ ಸೇವೆ ಸಲ್ಲಿಸಲು 1918ರಲ್ಲಿ ಭಾರತಕ್ಕೆ ಬರುತ್ತಾರೆ. ಆಗ ಪಾರ್ಶಿ ಎಂದು ರಿಜಿಸ್ಟರಿನಲ್ಲಿ ಬರೆಯಬೇಕು ಎಂಬ ಕರಾರಿನೊಂದಿಗೆ, ಪ್ರವಾಸಿಗೃಹದಲ್ಲಿ ಉಳಿದುಕೊಳ್ಳುತ್ತಾರೆ. ಇದು ಎರಡನೆ ಬಾರಿ ಜಾತಿಯನ್ನು ಮರೆಮಚುವ ಪ್ರಸಂಗ ಎದುರಾಗುತ್ತದೆ. ಕೆಲವು ದಿನಗಳ ನಂತರ ಬಾಬಾಸಾಹೇಬರ ಜಾತಿ ತಿಳಿದುಕೊಂಡ ಪಾರ್ಶಿಗಳು ಅವರ ಮೇಲೆ ಕತ್ತಿ ಹಿಡಿದುಕೊಂಡು ಬರುತ್ತಾರೆ ಮತ್ತು ಎಚ್ಚರಿಕೆಕೊಟ್ಟು ಹೊಗುತ್ತಾರೆ. ಜಾತಿ ಕಾರಣದಿಂದ ಮನೆ ಕಾಲಿ ಮಾಡಿಕೊಂಡು ಮತ್ತು ಬೀದಿಗೆ ಬರುತ್ತಾರೆ. ಅಲ್ಲಿಂದ ಮುಂದೆ ಗೆಳೆಯರ ಸಹಾಯ ಕೇಳಿಕೊಂಡು ಹೊದಾಗ ನಡೆದ ಘಟನೆಗಳು "ಸಾಯಂಕಾಲದೊಳಗಾಗಿ ಯಾವುದೇ ಕಾರಣಕ್ಕೂ ಇಲ್ಲಿರಕೂಡದೆಂದು ಅಂತಿಮ ಗಡುವು ಕೊಟ್ಟರು. ನಾನು ಹೊರಡಲು ಸಾಮಾನುಗಳನ್ನು ಕಟ್ಟಲೇಬೇಕೆಂದು ಆಗ್ರಹಿಸಿದರು. ಇಲ್ಲದಿದ್ದರೆ ಪರಿಣಾಮ ಉಗ್ರವಾಗುವುದೆಂದು ಎಚ್ಚರಿಸಿ ಹೋದರು. ನನಗೆ ದಿಗಿಲುಂಟಾಯಿತು. ಆಕಾಶವೇ ನನ್ನ ಮೇಲೆ ಕಳಚಿ ಬಿದ್ದ ಅನುಭವವಾಯಿತು. ಹೃದಯ ಕುಸಿದಂತೆ ಭಾಸವಾಯಿತು. ಎಲ್ಲರನ್ನೂ ಶಪಿಸಿದೆ. ಅತೀವ ವ್ಯಥೆಯಿಂದ ಕಣ್ಣೀರು ಕೋಡಿಯಾಗಿ ಹರಿಯಿತು"[7] ಬಾಬಾ ಸಾಹೇಬರು ಕಣ್ಣಿರಿಟ್ಟ ಪ್ರಸಂಗಗಳಲ್ಲಿ ಇದು ಒಂದು. ಜಾತಿ ಪ್ರಣಿತ ಭಾರತದಲ್ಲಿ ಪ್ರಭಾವಕ್ಕೊಳಗಾದ ಧರ್ಮಗಳು ಅನೇಕ ರೀತಿಯಾಗಿ ಅಸ್ಪೃಶ್ಯತೆಯನ್ನು ಆಚರಿಸುವುದು ಕಾಣಿಸುತ್ತದೆ. ಹಿಂದು, ಸಿಖ್, ಮುಸ್ಲಿಂ, ಜೈನ ಮತ್ತು ಕ್ರಿಶ್ಚಿಯನ್ನರಲ್ಲಿಯೂ ಜಾತಿಯತೆ ಸ್ವರೂಪಗಳು ಇವೆ ಎಂಬುದು ಅವರ ಅನುಭವಕ್ಕೆ ಬರುತ್ತದೆ. ಸ್ವತಃ ಕಲಿತವರಲ್ಲಿ ಮತ್ತು ಗೆಳೆಯರಲ್ಲಿ ಅಸ್ಪೃಶ್ಯತೆ ಎಷ್ಟು ಆಳವಾಗಿ ಬೇರು ಬಿಟ್ಟಿದೆ ಎಂಬುದು ಇಲ್ಲಿ ತಿಳಿಯುತ್ತದೆ. "ಬರೋಡಾ ಸಂಸ್ಥಾನದ ಅಸ್ಪೃಶ್ಯರಲ್ಲಿ ನನಗೆ ಗೆಳೆಯರಾರೂ ಇರಲಿಲ್ಲ. ಆದರೆ ಉಳಿದ ವರ್ಗಗಳಲ್ಲಿ ಗೆಳೆಯರಿದ್ದರು. ಅವರಲ್ಲೊಬ್ಬ ಹಿಂದೂ ಇನ್ನೊಬ್ಬ ಭಾರತೀಯ ಕ್ರಿಶ್ಚಿಯನ್. ಮೊದಲು ಹಿಂದೂ ಗೆಳೆಯನ ಬಳಿಗೆ ಹೋಗಿ ನನಗೊದಿದ್ದ ಆಪತ್ತನ್ನು ನಿವೇದಿಸಿದೆ. ಅವನದು ಶ್ರೇಷ್ಠ ಆತ್ಮ ಮತ್ತು ನನ್ನ ವೈಯಕ್ತಿಕ ಗೆಳೆಯ. ಅವನು ನನ್ನ ಸ್ಥಿತಿಯನ್ನು ಕೇಳಿ ದುಃಖಿತನಾದ ಮತ್ತು ನನ್ನನ್ನು ಇಂಥ ಸ್ಥಿತಿಗೆ ಈಡುಮಾಡಿದವರ ಬಗೆಗೆ ಕೋಪಗೊಂಡ. ಜೊತೆಗೆ ನೀನು ನಮ್ಮ ಮನೆಗೆ ಬಂದರೆ ನನ್ನ ಸೇವಕರು ಮನೆ ಬಿಟ್ಟು ಹೋಗುತ್ತಾರೆಂದೂ ಹೇಳಿದ. ಅವನ ಸೂಕ್ಷ್ಮ ಸೂಚನೆ ನನಗೆ

ಅರ್ಥವಾಯಿತು. ವಸತಿ ನೀಡುವಂತೆ ನಾನು ಒತ್ತಾಯ ಮಾಡಲಿಲ್ಲ. ಕ್ರಿಶ್ಚಿಯನ್ ಗೆಳೆಯನ ಮನೆಗೂ ಹೋಗುವ ಮನಸ್ಸಾಗಲಿಲ್ಲ. ಒಮ್ಮೆ ಅವನು ಬಂದು ತನ್ನೊಡನೆ ಇರಲು ಆಮಂತ್ರಸಿದ್ದ. ಆದರೆ ನಾನೇ ಅವನ ಆಮಂತ್ರಣವನ್ನು ತಿರಸ್ಕರಿಸಿ ಪಾರ್ಸಿ ವಸತಿ ಗೃಹದಲ್ಲಿಯೇ ಇರಲು ಇಷ್ಟಪಟ್ಟಿದ್ದೆ. ಕಾರಣವೆಂದರೆ ಅವನ ಹವ್ಯಾಸಗಳು ನನಗೆ ಹಿಡಿಸುತ್ತಿರಲಿಲ್ಲ... ನನಗೆ ತಾತ್ಕಾಲಿಕವಾಗಿ ವಸತಿ ಸೌಲಭ್ಯ ಒದಗಿಸಲು ಸಾಧ್ಯವೆ ಎಂದು ವಿನಂತಿಸಿದೆ. ಈ ಪ್ರಶ್ನೆಯನ್ನು ಅವನ ಮುಂದೆ ಇಟ್ಟಾಗ, 'ತನ್ನ ಹೆಂಡತಿಯು ಮರುದಿನವೇ ಊರಿಗೆ ಬರುತ್ತಿರುವುದಾಗಿಯೂ, ಅವಳನ್ನು ಒಂದು ಮಾತು ಕೇಳಿ ನಿನಗೆ ತಿಳಿಸುವುದಾಗಿಯೂ' ಹೇಳಿದ. ಇದು ಮುತ್ಸದ್ದಿತನದ ಉತ್ತರವಾಗಿತ್ತೆಂದು ಅನಂತರ ನನಗೆ ತಿಳಿಯಿತು. ಅವನು ಮತ್ತು ಅವನ ಹೆಂಡತಿ ಇಬ್ಬರೂ ಮೂಲದಲ್ಲಿ ಬ್ರಾಹ್ಮಣರು. ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಂಡಾಗ ಪತಿಯು ಉದಾರವಾದಿಯಾದ, ಆದರೆ ಅವನ ಹೆಂಡತಿಯು ಸಂಪ್ರದಾಯಸ್ಥಳಾಗಿಯೇ ಮುಂದುವರಿದಳು. ಹೀಗಾಗಿ ಅವನು ಅಸ್ಪೃಶ್ಯರನ್ನು ಮನೆಯಲ್ಲಿಟ್ಟುಕೊಳ್ಳಲು ಸುತಾರಾಂ ಒಪ್ಪಲಿಲ್ಲ. ಇದ್ದದ್ದೊಂದು ಕೊನೆಯ ಆಶಾಕಿರಣವೇ ನಂದಿಹೋದಂತಾಯಿತು"[8] ಜಾತಿ ವ್ಯವಸ್ಥೆಯು ಹೇಗೆ ಹೊಸ ರೂಪಗಳಲ್ಲಿ ಹರಡಿಕೊಂಡಿದೆ ಎಂಬುದು ಇಲ್ಲಿ ತಿಳಿದು ಬರುತ್ತದೆ. ಇಲ್ಲಿ ಸಮಾಜದಲ್ಲಿ ಇರುವ ಕಟ್ಟುಪಾಡುಗಳನ್ನು ಮೀರುವ ಮತ್ತು ಅದನ್ನು ಮೀರಲು ಹಣಗಾಡಿ ಮತ್ತೆ ಕಾರಣಗಳೆಂಬ ಚಹರೆಗಳ ಮೂಲಕ ಅದನ್ನು ಮುಚ್ಚಿಡುವ ಸಮಾಜ ನಿರ್ಮಾಣದ ಪ್ರಾರಂಭದ ಹಂತವಾಗಿ ಇಲ್ಲಿನ ಘಟನೆಗಳು ಕಾಣುತ್ತವೆ. ಇಲ್ಲಿ ಭಾರತೀಯ ಬೇರೆ ಬೇರೆ ಧರ್ಮಗಳಲ್ಲೂ ಅಸ್ಪೃಶ್ಯತೆ ಆಚರಣೆ ಚಿಗುರೋಡೆಯುತ್ತಿರುವುದು ಕಾಣಸಿಗುತ್ತದೆ. ಶಿಕ್ಷಣವನ್ನೆ ಅಸ್ತ್ರವಾಗಿ ಬಳಸಿದಾಗಲೂ ಜಾತಿ ವ್ಯವಸ್ಥೆ ಮತ್ತೊಂದು ಸ್ಥರ ಪಡೆದುಕೊಂಡಿದ್ದು ಕಾಣಿಸುತ್ತದೆ. ಅವರ ನಿರೀಕ್ಷಣೆಯ ಮತ್ತೊಂದು ಕೊಂಡಿಯು ಕಳಚಿದಂತೆ ಅಗುತ್ತದೆ.

"ಬಡಿಗೆ ಹಿಡಿದುಕೊಂಡಿದ್ದ ಹನ್ನೆರಡು ಜನ ಪಾರ್ಸಿಗಳು ನನ್ನನ್ನು ಬೆದರಿಸುತ್ತಾ ಸುತ್ತುವರಿದದ್ದು, ನಾನು ದೈನ್ಯದಿಂದ ಹೆದರಿ ನಿಂತಿದ್ದು, ಈ ಸನ್ನಿವೇಶ ಸಂಭವಿಸಿ 18 ವರ್ಷಗಳಾದರೂ ಇನ್ನೂ ನನ್ನ ಮನಸ್ಸಿನಿಂದ ಮಾಸಿಲ್ಲ. ಇಂದಿಗೂ ಕಣ್ಣಿಗೆ ಕಟ್ಟಿದಂತಿದೆ. ಇದರ ನೆನಪು ಮರುಕಳಿಸಿದ ಕೂಡಲೇ ಕಣ್ಣಲ್ಲಿ ನೀರು ಒತ್ತಿ ಬರುತ್ತವೆ. ಹಿಂದೂಗಳಿಗೆ ಅಸ್ಪೃಶ್ಯನಾದವ, ಪಾರ್ಸಿಗಳಿಗೂ ಅಸ್ಪೃಶ್ಯನೆ ಎಂಬುದು ಮೊದಲನೇ ಸಾರಿ ನನ್ನ ಅನುಭವಕ್ಕೆ ಬಂತು"[9] ಸಮಾಜದಲ್ಲಿ ಇದೊಂದು ಬಗೆಯ ವಿಚಿತ್ರ ವರ್ತನೆ ಅನುಭವಿಸಿದ ಬಾಬಾ ಸಾಹೇಬರಿಗೆ ಆಶ್ಚರ್ಯ ಉಂಟಾಗುತ್ತದೆ. ಇದೂವರೆಗೂ ಅನುಭವಕ್ಕೆ ಇರುವ ಹಿಂದೂ ಸಮಾಜದಲ್ಲಿನ ಆಚರಣೆಗಳು. ಆದರೆ ಇದೆ ಮೊದಲ ಬಾರಿಗೆ ಅವರಿಗೆ ಬೇರೆ ಧರ್ಮಗಳಿಂದ ಅಸ್ಪೃಶ್ಯತೆ ಅನುಭವಾಗುತ್ತದೆ. ಹೀಗಾಗಿ ಬಹುಷಃ ಬಾಬಾ ಸಾಹೇಬರು ಬುದ್ಧ ಧರ್ಮವನ್ನು ಸ್ವಿಕರಿಸಲು ಪ್ರೇರಣೆ ಆಗಿರಬಹುದು ಅನ್ನಿಸುತ್ತದೆ. ಬುದ್ಧ ಧರ್ಮ ಮನುಷ್ಯ ಪ್ರಣಿತ ಧರ್ಮವಾದ್ದರಿಂದ ಅಲ್ಲಿ ದೇವರು ದೆವ್ವಗಳ ಗೊಡವೆ ಇಲ್ಲಾ ಮತ್ತು ಅಲ್ಲಿ ಏನಿದ್ದರು ಮಾನವತೆಯ ಸಂದೇಶ ಇರುವುದು ಅವರ ಸಂಶೋಧನೆಯಲ್ಲಿ ಗುರ್ತಿಸಿದ್ದಾರೆ. ಬಾಬಾ ಸಾಹೇಬರಿಗೆ ಕಾಡಿದ್ದು ಇಲ್ಲಿ ಶಿಕ್ಷಣದ ಪ್ರಶ್ನೆ. ಅವರ ದೃಷ್ಟಿಯಲ್ಲಿ ಶಿಕ್ಷಣದಿಂದ ಸಮಾಜದಲ್ಲಿ ಶೋಷಣೆ ಮುಕ್ತವಾಗುತ್ತದೆ ಎಂಬುದಾಗಿತ್ತು. ಆದ್ದರಿಂದ ಎಲ್ಲರೂ

ಶಿಕ್ಷಣವಂತರಾಗಿ ಎಂಬ ಕರೆಯನ್ನು ಕೊಟ್ಟರು. ಬದಲಾದ ಸನ್ನಿವೇಶದಲ್ಲಿ ಶಿಕ್ಷಣದಿಂದಲೂ ಅಸ್ಪೃಶ್ಯರು ಅಸ್ಪೃಶ್ಯರಾಗಿಯೆ ಉಳಿದಿದ್ದಾರೆ ಎಂಬುದು ಅವರಿಗೆ ಅನುಭವಕ್ಕೆ ಬರುತ್ತದೆ. "ಕೀಳು ಕೆಲಸದ ಆಳಿಗಿಂತಲೂ ಎಷ್ಟೂ ಶ್ರೇಷ್ಠನಲ್ಲದ ಹಿಂದೂ ಟಾಂಗಾವಾಲಾನಿಗೆ ಗೌರವವಿರುತ್ತದೆ. ಅವನು ಎಲ್ಲ ಅಸ್ಪೃಶ್ಯರಿಗಿಂತಲೂ, ಅಷ್ಟೇ ಏಕೆ, ಅವರಲ್ಲಿಯೆ ಕಾಯ್ದೆಯಲ್ಲಿ ಬ್ಯಾರಿಸ್ಟರ್ ಪದವಿ ಪಡೆದವನಿಗಿಂತಲೂ ಶ್ರೇಷ್ಠ ವ್ಯಕ್ತಿ ಎಂದು ಭಾವಿಸುತ್ತಾರೆ"[10] ವಿದ್ಯಾಭ್ಯಾಸ ಮುಗಿಸಿ ಬಂದ ಬಾಬಾಸಾಹೇಬರಿಗೆ ಮರೆತು ಹೊದಂತೆ ಇದ್ದ ಅಸ್ಪೃಶ್ಯತೆಯ ಕರಾಳಮುಖಗಳು ಭಿನ್ನ ರೂಪದಲ್ಲಿ ಅನುಭವಕ್ಕೆ ಸಿಕ್ಕಿ ಮತ್ತೊಮ್ಮೆ ನಾನು ಅಸ್ಪೃಶ್ಯನಾದೆ ಎಂದು ಬರೆದುಕೊಳ್ಳುತ್ತಾರೆ. ಬಾಬಾ ಸಾಹೇಬರ ದೃಷ್ಟಿಯಲ್ಲಿ ಶಿಕ್ಷಣ ಪಡೆದು ಒಳ್ಳೆಯ ಹುದ್ದೆಯಲ್ಲಿ ಇದ್ದರೆ. ನಗರಗಳಲ್ಲಿ ಇದ್ದರೆ ಅಸ್ಪೃಶ್ಯತೆ ಹೋಗಬಹುದು. ಒಳ್ಳೆಯ ಬಟ್ಟೆ, ಆಹಾರ, ಆಚಾರ ಬದಲಿಸಬಹುದು ಅಂದು ಕೊಂಡಿದ್ದರು. ಆದರೆ ಬ್ಯಾರಿಸ್ಟರ ಪದವಿದರನಾಗಿ ಬಂದರೂ, ಸೂಟು, ಬೂಟು ಧರಿಸಿದರು ಜಾತಿಯ ಪ್ರಶ್ನೆ ತಪ್ಪುವುದಿಲ್ಲ.

"ಪ್ರತಿಯೊಬ್ಬನೂ ತನ್ನ ಧರ್ಮದಂತೆ ನಡೆಯಬೇಕು. ಅಂದರೆ, ಸಾರ್ವಜನಿಕ ತೊಟ್ಟಿಯ ನೀರನ್ನು ಬಳಸಕೂಡದು."[11] ಧರ್ಮ ಮುಖ್ಯ ಆದರೆ ನೀರಿನ ಪ್ರಶ್ನೆ ಬಂದಾಗ ಧರ್ಮದ ಧ್ವನಿ ಕಟ್ಟುತ್ತದೆ. ಅಸ್ಪೃಶ್ಯತೆಯ ಪ್ರಶ್ನೆ ಬಂದಾಗಲೂ ಧರ್ಮದ ಧ್ವನಿ ಕಟ್ಟುತ್ತದೆ. "ನಿನ್ನ ಧರ್ಮ ಕಲಿಸುತ್ತಿರುವುದು ಇದನ್ನೇ ಏನು? ಅಸ್ಪೃಶ್ಯನು ಮಹಮ್ಮದೀಯನಾಗಿ ಮತಾಂತರ ಹೊಂದಿದರೆ, ಅವನು ಈ ತೊಟ್ಟಿಯನ್ನು ಮುಟ್ಟದಂತೆ, ಇದರ ನೀರು ಬಳಸದಂತೆ ತಡೆಯುತ್ತೀ ಏನು? ಎಂದು ಅವನನ್ನು ಸಿಟ್ಟಿನಿಂದಲೇ ಕೇಳಿದೆ. ಈ ನೇರ ಪ್ರಶ್ನೆಗಳು ಅಲ್ಲಿಯ ಮಹಮ್ಮದೀಯರ ಮೇಲೆ ಪರಿಣಾಮ ಬೀರಿದಂತೆ ಕಂಡಿತು. ಅವರು ನಿರುತ್ತರರಾದರು ಮತ್ತು ಮೌನ ಧರಿಸಿದರು"[12] ಪ್ರಮುಖವಾಗಿ ನೀರಿನ ಪ್ರಶ್ನೆ ಬಂದಾಗ ಧರ್ಮ ಕಾನೂನು ಅದರ ರೀತಿ ನೀತಿಗಳು ನಡೆಸಿಕೊಂಡದ್ದು ಬಹಳವೆ ಅಮಾನವೀಯವಾದ್ದವು. ಇಲ್ಲಿ ಬಾಬಾ ಸಾಹೇಬರು ಸ್ವತಃ ನಾನು ಇಸ್ಲಾಂ ಧರ್ಮದವರು ಎಂದಾಗಲೂ, ನೀರು ಕೇಳಿದರು ಕೂಡಾ ಅಲ್ಲಿ ನೀರನ್ನು ಮುಟ್ಟಲು ಬಿಡುವುದಿಲ್ಲ. ಧರ್ಮ ಎಂದರೇನು, ಧರ್ಮದಿಂದ ಕಲಿಯುತ್ತಿರುವುದು ಏನು? ಧರ್ಮದ ಹೆಸರಿನಲ್ಲಿ ಅಮಾನವೀಯ ನೆಲೆಯಲ್ಲಿ ನಡೆಸಿಕೊಂಡ ರೀತಿ ಅವರನ್ನು ಕಾಡುತ್ತದೆ. ಧರ್ಮ ಎಂದರೆ ಅದು ಮಾನವೀಯವಾಗಬೇಕಾದದ್ದು ಮುಖ್ಯ ಎಂಬುದು ಅವರ ದೃಷ್ಟಿಕೋನವಾಗಿತ್ತು.

"ಈ ತಿಂಗಳ ಐದನೆಯ ದಿನಾಂಕದಂದು ನನಗೆ ಮಗುವೊಂದು ಜನಿಸಿತು. ಏಳನೆಯ ದಿನಾಂಕದಂದು ನನ್ನ ಬಾಣಂತಿ ಪತ್ನಿಗೆ ಭೇದಿಯಾಗಿ ಅನಾರೋಗ್ಯದಿಂದ ಬಳಲಿದಳು. ಆಕೆಯ ಶಕ್ತಿ ಉಡುಗಿತು. ಎದೆ ಊದಿಕೊಂಡಿತು. ಉಸಿರಾಡುವುದು ಕಷ್ಟವಾಯಿತು. ಪಕ್ಕೆ ಎಲುಬುಗಳು ಅತಿಯಾಗಿ ನೋಯಹತ್ತಿದವು. ನಾನು ಡಾಕ್ಟರ್ನ್ನು ಕರೆಯಲು ಹೋದೆ. ಆದರೆ ಅವರು ಅಸ್ಪೃಶ್ಯನ ಮನೆಗೆ ಬಂದು, ತಾಯಿ ಮಗುವನ್ನು ತಪಾಸಿಸಲಾರೆ ಅಂದರು. ಆಗ ನಾನು ಊರ ಪ್ರಮುಖ ಮತ್ತು ಗಾರಾಸಿಯಾ ದರ್ಬಾರ ಅವರ ಬಳಿಗೆ ಹೋಗಿ ನನಗೆ ಸಹಾಯ ಮಾಡಲು ಬೇಡಿಕೊಂಡೆ. ನಾಗರಶೇಠನು ನಾನು ಡಾಕ್ಟರ್ರಿಗೆ ಕೊಡಬೇಕಾಗಿದ್ದ ಎರಡು ರೂಪಾಯಿಗೆ ಜಾಮೀನು ಆದನು. ರೋಗಿಗಳನ್ನು ಹರಿಜನರ ಕೇರಿಯ ಹೊರಗೆ ತಂದರೆ ಮಾತ್ರ ತಪಾಸಿಸುವದಾಗಿ ಕರಾರು ಹಾಕಿದನು.

ನಾನು, ನನ್ನ ಪತ್ನಿ ಮತ್ತು ನವಜಾತ ಶಿಶುವನ್ನು ಹರಿಜನರ ಕೇರಿಯ ಹೊರಗೆ ಒಯ್ದನು. ಆಗ ಡಾಕ್ಟರ್ ತನ್ನ ಉಷ್ಣಮಾಪಕವನ್ನು ಮುಸ್ಲಿಮನ ಕೈಯ್ಯಲ್ಲಿ ಕೊಟ್ಟನು. ಅವನು ನನಗೆ ಕೊಟ್ಟನು. ನಾನು ನನ್ನ ಹೆಂಡತಿಗೆ ಕೊಟ್ಟೆ. ಅನಂತರ ಅದೇ ರೀತಿ ತಿರುಗಿ ಅದು ಡಾಕ್ಟರ್ ಕೈ ಸೇರಿತು. ಅದನ್ನು ನೋಡಿದ ಡಾಕ್ಟರ್ ರೋಗಿ ಪತ್ನಿಯು ನ್ಯುಮೋನಿಯಾದಿಂದ ಬಳಲುತ್ತಿದ್ದಾಳೆಂದು ಹೇಳಿದ. ಅಷ್ಟೊತ್ತಿಗೆ ರಾತ್ರಿ ಎಂಟು ಗಂಟೆಯಾಗಿತ್ತು. ಡಾಕ್ಟರ್ ದವಾಖಾನೆಗೆ ಹೋಗಿ ಔಷಧ ಕೊಟ್ಟು ಕಳಿಸಿದ. ನಾನು ಪೇಟೆಗೆ ಹೋಗಿ ಸ್ವಲ್ಪ ಅಗಸೆಬೀಜ ತಂದು ರೋಗಿಗೆ ಕೊಟ್ಟೆ. ಬಾಣಂತಿ ಮತ್ತು ಕೂಸಿನ ತೊಂದರೆ ಕಡಿಮೆಯಾಗಲಿಲ್ಲ. ನಾನು ಕರಾರಿನಂತೆ ಎರಡು ರೂಪಾಯಿ ಕೊಟ್ಟರು ರೋಗಿಗಳನ್ನು ನೋಡಲು ಡಾಕ್ಟರ್ ತಿರುಗಿ ಬರಲಿಲ್ಲ. ರೋಗವು ಅಪಾಯಕಾರಿ ಸ್ಥಿತಿ ತಲಿಪಿತ್ತು. ದೇವರ ಮೇಲೆ ಭಾರ ಹಾಕಿದೆವು. ಆದರೆ ದೇವರೂ ನನ್ನ ನೆರವಿಗೆ ಬರದಾದ. ನನ್ನ ವಂಶದ ಜ್ಯೋತಿ ನಂದಿತು. ನನ್ನ ಪತ್ನಿಯೂ ಕೂಡ ಇಂದು ಸಾಯಂಕಾಲ ಎರಡು ಗಂಟೆಯ ಸುಮಾರಿಗೆ ಇಹಲೋಕ ತ್ಯಜಿಸಿದಳು"[13] ಈ ಎಲ್ಲ ಸಮಸ್ಯೆಗಳ ಮಧ್ಯೆ ಹೆಂಡತಿಯ ಅನಾರೋಗ್ಯ ಅತಿಯಾಗಿ ಕಾಡಿದ್ದು. ಇಲ್ಲಿ ಒಬ್ಬ ವಿಜ್ಞಾನ ಓದಿದ ವೈಧ್ಯನು ಕೂಡಾ ಅನಾರೋಗ್ಯಕಾಲದಲ್ಲಿ ಅಸ್ಪೃಶ್ಯತೆ ಆಚರಿಸುತ್ತಾನೆ. ಬೇಡಿಕೊಂಡರು ಬರದೆ ಹೊದ ಡಾಕ್ಟರ್ ಕೆಲವು ಒಪ್ಪಂದದ ಮೇರೆಗೆ ಒಪ್ಪಿಕೊಳ್ಳುವ ಪ್ರಸಂಗ. ಮಾನವಿಯತೆ ಕ್ರೌರ್ಯದ ಮುಖವನ್ನು ಹೊತ್ತಿರುವುದು ಕಾಣಿಸುತ್ತದೆ. ಅದು ಬೇರೆಯವರ ಕಡೆಯಿಂದ ಪರೀಕ್ಷಿಸಿ ಅದಕ್ಕೆ ಮದ್ದು ಕೊಡುವದು ಅತ್ಯಂತ ಅಮಾನವಿಯ ಕೃತ್ಯವಾಗಿ ಕಾಡುತ್ತದೆ. ಈ ಎಲ್ಲ ಘಟನೆಗಳು ನಡೆದರು ಅಲ್ಲಿನ ಸಾವುಗಳು ಮೌನ ಸಂಘರ್ಷಕ್ಕಿಡಗುತ್ತವೆ. ಡಾಕ್ಟರ್ ಕೂಡಾ ಅಸ್ಪೃಶ್ಯನನ್ನು ಸ್ಪರ್ಶಿಸುವುದಕ್ಕಿಂತಲೂ ಅಮಾನುಷ್ಯ ವ್ಯಕ್ತಿ ಎಂದಾದರೂ ಕರೆಯಿಸಿಕೊಳ್ಳಲು ಇಷ್ಟಪಡುತ್ತಾನೆ.

ಬಾಬಾ ಸಾಹೇಬರ ಬದುಕಿನ ಅನುಭವಗಳ ಮೂಲಕ ಕಂಡುಕೊಂಡ ಪ್ರಯೋಗಗಳು.

- ಅಂಚಿನ ಸಮುದಾಯದ ಎಲ್ಲರೂ ಶಿಕ್ಷಣವಂತರಾಗಬೇಕು.
- ಬುದ್ಧ ಧರ್ಮ ಮಾನವತೆಯ ಧರ್ಮವಾದ್ದರಿಂದ ಬುದ್ಧನ ತತ್ವಗಳನ್ನು ಅನುಸರಿಸುವುದು.
- ನೀರು ಮುಟ್ಟದಂತೆ ನಿರಾಕರಿಸಲಾಗಿದೆಯೊ, ಅಂತಹ ನೀರಿನ ಆಕರಗಳನ್ನು ಸ್ಪರ್ಶಿಸುವ ಮೂಲಕ ಬಿಡುಗಡೆಗೊಳ್ಳುವುದು.
- ದೇವಸ್ಥಾನ, ಮತ್ತು ಸಾರ್ವಜನಿಕ ಪ್ರದೇಶಗಳಲ್ಲಿ ಪ್ರವೇಶ ಮಾಡುವುದು
- ಮೂಢನಂಬಿಕೆ, ಅಸ್ಪೃಶ್ಯತೆ, ಜಾತಿಯತೆ ಮತ್ತು ಧರ್ಮಾಂದತೆಯಿಂದ ಸಮಾಜವನ್ನು ಮುಕ್ತ ಗೊಳಿಸುವುದು.
- ಇತರ ಅನೇಕ ಸಮಸ್ಯೆಗಳನ್ನು ಸಂವಿಧಾನದ ಮೂಲಕ ಹೋಗಲಾಡಿಸಲು ಅನುಕೂಲವಾಗಿದೆ.

ಒಟ್ಟಾರೆಯಾಗಿ ಅಸ್ಪೃಶ್ಯತೆ, ಜಾತಿಯತೆ ಭಾರತೀಯ ಸಮಾಜಕ್ಕೆ ಅಂಟಿರುವ ಒಂದು ದೊಡ್ಡ ಸಾಂಕ್ರಾಮಿಕ ರೋಗ. ಇದನ್ನು ಇಂದಿನವರೆಗೂ ಬಾಬಾಸಾಹೇಬರನ್ನು ಸೇರಿ ಇನ್ನು ಅನೇಕ ಜನ ಅನುಭಾವಿಗಳು, ಚಿಂತಕರು ತಮ್ಮ ಜೀವನ ಪ್ರಯೋಗಗಳ ಮೂಲಕ ಅಳಿಸಲು ಪ್ರಯತ್ನ ಪಟ್ಟರು. ಅದು ಯಾವುದೋ ಒಂದು ರೂಪವನ್ನು ಪಡೆದುಕೊಂಡು ಮತ್ತೆ ಮತ್ತೆ ಅದು ಜೀವಂತಿಕೆ ಸ್ವರೂಪಗಳು ಸಮಾಜದಲ್ಲಿ ಕಾಣುತಿರುವುದು ದುರಂತಮಯವಾದದ್ದು.

## ಅಡಿ ಟಿಪ್ಪಣಿಗಳು:

1. ಶಿವರಾಂ ಎನ್. ಆರ್. (2010). ಬಾಬಾಸಾಹೇಬ್ ಡಾ. ಅಂಬೇಡ್ಕರ್‌ರವರ ಆತ್ಮಕಥೆ. ಜೈ ಭೀಮ್ ಪ್ರಕಾಶನ. ಹಾಸನ. ಪು.ಸಂ. 10
2. ಶಿವರಾಂ ಎನ್. ಆರ್. (2010). ಬಾಬಾಸಾಹೇಬ್ ಡಾ. ಅಂಬೇಡ್ಕರ್‌ರವರ ಆತ್ಮಕಥೆ. ಜೈ ಭೀಮ್ ಪ್ರಕಾಶನ. ಹಾಸನ. ಪು.ಸಂ. 13-14
3. ಶಿವರಾಂ ಎನ್. ಆರ್. (2010). ಬಾಬಾಸಾಹೇಬ್ ಡಾ. ಅಂಬೇಡ್ಕರ್‌ರವರ ಆತ್ಮಕಥೆ. ಜೈ ಭೀಮ್ ಪ್ರಕಾಶನ. ಹಾಸನ. ಪು.ಸಂ. 18-19
4. ಶಿವರಾಂ ಎನ್. ಆರ್. (2010). ಬಾಬಾಸಾಹೇಬ್ ಡಾ. ಅಂಬೇಡ್ಕರ್‌ರವರ ಆತ್ಮಕಥೆ. ಜೈ ಭೀಮ್ ಪ್ರಕಾಶನ. ಹಾಸನ. ಪು.ಸಂ. 20-21
5. ಶಿವರಾಂ ಎನ್. ಆರ್. (2010). ಬಾಬಾಸಾಹೇಬ್ ಡಾ. ಅಂಬೇಡ್ಕರ್‌ರವರ ಆತ್ಮಕಥೆ. ಜೈ ಭೀಮ್ ಪ್ರಕಾಶನ. ಹಾಸನ. ಪು.ಸಂ. 28
6. ಶಿವರಾಂ ಎನ್. ಆರ್. (2010). ಬಾಬಾಸಾಹೇಬ್ ಡಾ. ಅಂಬೇಡ್ಕರ್‌ರವರ ಆತ್ಮಕಥೆ. ಜೈ ಭೀಮ್ ಪ್ರಕಾಶನ. ಹಾಸನ. ಪು.ಸಂ. 29
7. ಶಿವರಾಂ ಎನ್. ಆರ್. (2010). ಬಾಬಾಸಾಹೇಬ್ ಡಾ. ಅಂಬೇಡ್ಕರ್‌ರವರ ಆತ್ಮಕಥೆ. ಜೈ ಭೀಮ್ ಪ್ರಕಾಶನ. ಹಾಸನ. ಪು.ಸಂ. 29-30
8. ಶಿವರಾಂ ಎನ್. ಆರ್. (2010). ಬಾಬಾಸಾಹೇಬ್ ಡಾ. ಅಂಬೇಡ್ಕರ್‌ರವರ ಆತ್ಮಕಥೆ. ಜೈ ಭೀಮ್ ಪ್ರಕಾಶನ. ಹಾಸನ. ಪು.ಸಂ. 32
9. ಶಿವರಾಂ ಎನ್. ಆರ್. (2010). ಬಾಬಾಸಾಹೇಬ್ ಡಾ. ಅಂಬೇಡ್ಕರ್‌ರವರ ಆತ್ಮಕಥೆ. ಜೈ ಭೀಮ್ ಪ್ರಕಾಶನ. ಹಾಸನ. ಪು.ಸಂ. 36
10. ಶಿವರಾಂ ಎನ್. ಆರ್. (2010). ಬಾಬಾಸಾಹೇಬ್ ಡಾ. ಅಂಬೇಡ್ಕರ್‌ರವರ ಆತ್ಮಕಥೆ. ಜೈ ಭೀಮ್ ಪ್ರಕಾಶನ. ಹಾಸನ. ಪು.ಸಂ. 39
11. ಶಿವರಾಂ ಎನ್. ಆರ್. (2010). ಬಾಬಾಸಾಹೇಬ್ ಡಾ. ಅಂಬೇಡ್ಕರ್‌ರವರ ಆತ್ಮಕಥೆ. ಜೈ ಭೀಮ್ ಪ್ರಕಾಶನ. ಹಾಸನ. ಪು.ಸಂ. 39
12. ಶಿವರಾಂ ಎನ್. ಆರ್. (2010). ಬಾಬಾಸಾಹೇಬ್ ಡಾ. ಅಂಬೇಡ್ಕರ್‌ರವರ ಆತ್ಮಕಥೆ. ಜೈ ಭೀಮ್ ಪ್ರಕಾಶನ. ಹಾಸನ. ಪು.ಸಂ. 40-41
13. ಶಿವರಾಂ ಎನ್. ಆರ್. (2010). ಬಾಬಾಸಾಹೇಬ್ ಡಾ. ಅಂಬೇಡ್ಕರ್‌ರವರ ಆತ್ಮಕಥೆ. ಜೈ ಭೀಮ್ ಪ್ರಕಾಶನ. ಹಾಸನ. ಪು.ಸಂ. 44

**ಪರಾಮರ್ಶನ ಗ್ರಂಥಗಳು:**


1. ಶಿವರಾಂ ಎನ್. ಆರ್. (2010). ಬಾಬಾಸಾಹೇಬ್ ಡಾ. ಅಂಬೇಡ್ಕರ್‌ರವರ ಆತ್ಮಕಥೆ. ಜೈ ಭೀಮ್ ಪ್ರಕಾಶನ. ಹಾಸನ.
2. ನರೇಂದ್ರಕುಮಾರ್ ಎಸ್. (2002). ಅಂಬೇಡ್ಕರ ಸೂಕ್ತಿಗಳು. ಚೇತನ ಬುಕ್ ಹೌಸ್. ಮೈಸೂರು.
3. ಅಂಬೇಡ್ಕರ್ ಬಿ. ಆರ್. ಸದಾಶಿವ ಮರ್ಜಿ (ಅನು). (2015). ವೀಸಾದ ನಿರೀಕ್ಷೆಯಲ್ಲಿ ನೆನಪುಗಳು. ಲಡಾಯಿ ಪ್ರಕಾಶನ. ಗದಗ.
4. ಅಪ್ಪಗೇರೆ ಸೋಮಶೇಖರ. (2023). ಮಾನವೀತೆಯ ಮಾರ್ಗದಾತ. ಚಿಂತನ ಚಿತ್ತಾರ. ಮೈಸೂರು.



**Funding:**

This study was not funded by any grant.


**Conflict of interest:**

The Authors have no conflict of interest to declare that they are relevant to the content of this article.


**About the License:**

© The Authors 2024. The text of this article is open access and licensed under a Creative Commons Attribution 4.0 International License.